ಅಚ್ಚರಿಯಾಯಿತು. ಆದರೆ, ಅವನ ಹೊರಮನಸ್ಸು ಅದನ್ನು ಒಪ್ಪಿಕೊಳ್ಳಲು ಸುತಾರಾಂ ಸಿದ್ಧವಿರಲಿಲ್ಲ.

ತಡೆಯಲಾಗದೇ ಪಕ್ಕದಲ್ಲಿ ಕೂತಿದ್ದ ವೃದ್ಧರನ್ನು 'ಡಾಕ್ಟರ್ ಸಿಗಬಹುದಾ?' ಎಂದ. ಅದಕ್ಕೆ ಅವರು, 'ಅಲ್ಲಿ ಕೌಂಟರ್‌ನಲ್ಲಿ ತಿಳಿಸಿದ್ದು. ಇವತ್ತು ಮಂಗಳವಾರ, ಆಪರೇಷನ್ ಜಾಸ್ತಿ ಅಂತ. ಎಷ್ಟು ಹೊತ್ತಿಗೆ ಬರುತ್ತಾರೆ ಎನ್ನುವುದು ಇಲ್ಲಿ ಕಾಯ್ದು ಕೂತವರ ಅದೃಷ್ಟದ ಮೇಲೆ ಇದೆ' ಎಂದವರು ಮತ್ತದೇ ಸಣ್ಣ ನಗು ನಕ್ಕರು.

ಸುಲೇಖ ಮನಸ್ಸಿನಲ್ಲೇ, 'ಇವರಂಥ ಹಳೆ ಜನಗಳೆಲ್ಲ ಹೀಗೇ, ಎಲ್ಲವನ್ನೂ ಅದೃಷ್ಟದ ಮೇಲೆ ಬಿಡ್ತಾರೆ' ಎಂದು ಬೈಯ್ದುಕೊಂಡು ಸುಮ್ಮನಾದ. ಅಷ್ಟರಲ್ಲಿ ಸುಲೇಖನ ಮೊಬೈಲ್‌ಗೆ ಕರೆ ಬಂತು. ತೀರಾ ಸಣ್ಣಗೆ ಶಬ್ದನಿಯಂತ್ರಣ ಮಾಡಿದ್ದರೂ ಪಕ್ಕದಲ್ಲೇ ಕೂತಿದ್ದ ವೃದ್ಧರಿಗೆ ಆಚೆ ಕಡೆಯ ಧ್ವನಿ ಕೇಳಿಸುತ್ತಿತ್ತು. ಅರ್ಧ ಕನ್ನಡ, ಇನ್ನರ್ಧ ಇಂಗ್ಲಿಷ್‌ನಲ್ಲಿ ಹೆಣ್ಣುಸ್ವರವೊಂದು ಕಿರುಚುವ ಸ್ವರದಲ್ಲಿ ಅತ್ತ ಕಡೆಯಿಂದ ಮಾತನಾಡುತ್ತಿತ್ತು. ಸುಲೇಖನ ಮುಖದ ಒಂದು ಬದಿ ಮಾತ್ರ ಕಾಣುತ್ತಿದ್ದರೂ ಅವನ ಮುಖದಲ್ಲಾಗುತ್ತಿದ್ದ ಭಾವಗಳ ಸರಿದಾಟ ಅವರಿಗೆ ಅರ್ಥವಾಗುತ್ತಿತ್ತು. ಅತ್ತ ಕಡೆಯ ಮಾತಿಗೆ ಕ್ಲುಪ್ತವಾಗಿ ಸಣ್ಣದನಿಯಲ್ಲಿ ಉತ್ತರಿಸುತ್ತಿದ್ದ ಸುಲೇಖ ಕೊನೆಗೊಮ್ಮೆ ಆ ಕರೆಯನ್ನು ಕಟ್ ಮಾಡಿ, ಪಕ್ಕದಲ್ಲಿದ್ದ ವೃದ್ಧರತ್ತ ನೋಡಿದ. ಅವರ ನಿರ್ಲಿಪ್ತ ಮುಖ ನೋಡಿ ಈವರೆಗಿನ ಮಾತುಗಳು ಅವರಿಗೆ ಕೇಳಿಸಿಲ್ಲ ಎಂದು ಸ್ವಲ್ಪ ಸಮಾಧಾನಪಟ್ಟ.

ಮೊಬೈಲ್ ಕರೆಯ ಸೂಚನೆಯನ್ನು ನಿಶ್ಶಬ್ದವಾಗಿಸಿದರೂ 'ಚೋಂಯ್..ಚೋಂಯ್...' ಎಂದು ಕಿರಿ ಕಿರಿ ಮಾಡುತ್ತಲೇ ಇತ್ತು. ಸುಲೇಖ ಅದನ್ನು ಸ್ವೀಕರಿಸಲಿಲ್ಲ. ಆ ವೃದ್ಧರು, 'ಯಾಕೆ ತಗೊಳ್ಳುತ್ತಿಲ್ಲ?' ಎಂದು ಕೇಳಬೇಕೆಂದವರು ಏನೋ ಅನ್ನಿಸಿ ಸುಮ್ಮನಾದರು. ನಂತರದಲ್ಲಿ ಮೆಸೇಜ್‌ಗಳು ಬರುವ ಸದ್ದುಗಳು ಅನವರತವಾಗಿದ್ದವು. ಆ ಘಳಿಗೆಯಲ್ಲಿ ದಿಕ್ಕೆಟ್ಟ, ಹತಾಶನಾದವನಂತೆ ಸುಲೇಖ ಆ ವೃದ್ಧರಿಗೆ ಗೋಚರಿಸಿದ. ಕೆಲವು ನಿಮಿಷದ ನಂತರ ಅವು ನಿಂತವು. ಕ್ಷಣದಲ್ಲೇ ಸುಲೇಖ 'ಹುಶ್' ಎನ್ನುತ್ತ ಹಿಂದಕ್ಕೆ ಒರಗಿದ. ಆ ವೃದ್ಧರಿಗೆ ಸುಲೇಖನ ಒಳಗೆ ಆಗುತ್ತಿದ್ದ ಆಂದೋಲನದ ಸ್ವಲ್ಪವೇ ಕುರುಹು ಗೋಚರಿಸಿತು. 'ಈ ಹುಡುಗ ಯಾತಕ್ಕೋ ಅತಿಯಾಗಿ ಬಳಲುತ್ತಿದ್ದಾನೆ. ಅದನ್ನು ಎದುರಿಸುವ ಶಕ್ತಿ ಅವನಿಗೆ ಇದ್ದಂತಿಲ್ಲ. ಅವನೊಳಗೆ ಮೌನವಿಲ್ಲ; ನೀರವತೆ ಇದೆ, ನಿರ್ಜನತೆ ಇದೆ' ಎಂದು ಅನಿಸಿತು ಅವರಿಗೆ.

ಮೌನ ಮತ್ತು ಸಶಬ್ದದ ವ್ಯತ್ಯಾಸಗಳ ಅರಿವು, ಅನುಭವವಿದ್ದ ಆ ವೃದ್ಧರಿಗೆ ಇವನನ್ನು ಮಾತನಾಡಿಸುವ ಮೂಲಕವೇ ಗೆಲುವಾಗಿಸಬೇಕು ಎನ್ನಿಸಿತು. 'ನಿಮ್ಮ ಹೆಸರು ಏನಂದ್ರೀ, ಸುಲೇಖ ಅಂತ ಅಲ್ವಾ? ಯಾಕೆ ಇಲ್ಲಿ ಬಂದದ್ದು ಕೇಳಬಹುದಾ?' ಎಂದಾಗ ಸುಲೇಖನಿಗೆ ಈ ಮುದುಕನದು ಎಂಥ ಅಧಿಕಪ್ರಸಂಗ ಅನಿಸಿದರೂ ಅವನೊಳಗಿನ ನಿರುಮ್ಮಳವಾಗಬೇಕು ಎನ್ನುವ ಒತ್ತಡ ಮಾತಿಗೆ ತೊಡಗಿಸಿತ್ತು.

'ಅಪ್ಪ ಇಲ್ಲಿ ಅಡ್ಮಿಟ್ ಆಗಿದ್ದಾರೆ. ಅವರೊಬ್ಬರೇ ಊರಿನಲ್ಲಿರೋದು. ಮನೆಯ ಪಕ್ಕದವರ್‍ಯಾರೋ ಅವರಿಗೆ ಹುಶಾರಿಲ್ಲದಕ್ಕೆ ಇಲ್ಲಿ ಸೇರಿಸಿದ್ದಾರೆ. ನನಗೆ ಗೊತ್ತಾಗಿದ್ದೇ ತಡವಾಗಿ. ಇವತ್ತು ಬೆಳಗ್ಗೆ ಬಂದೆ. ಅವರನ್ನು ನೋಡ್ಬೇಕು, ಅಷ್ಟರ ಮೊದಲು ಅಪ್ಪನ ಕಂಡೀಷನ್ ಬಗ್ಗೆ ಡಾಕ್ಟರ್ ಬಳಿ ಕೇಳೋಣಂತ ಇಲ್ಲಿ ಬಂದೆ' ಎಂದ.

ಮೊದಲಾಗಿದ್ದರೆ ಆ ವೃದ್ಧರು ಸುಲೇಖನ ಮಾತಿಗೆ ಅಚ್ಚರಿ ಪಡುತ್ತಿದ್ದರೇನೋ? ಮಾಗುವಿಕೆಯ ಜೊತೆಗೆ ಬದಲಾದ ಈ ಕಾಲದ ಮನಃಸ್ಥಿತಿಗಳ ಜೊತೆಗಿನ ಅವರ ಅನುಭವಗಳು ಆಶ್ಚರ್ಯವನ್ನೇನೂ ಹುಟ್ಟಿಸಲಿಲ್ಲ. ಆದರೂ, 'ಈ ಮೊದಲೇ ಅಪ್ಪನನ್ನು ನೋಡಬಹುದಿತ್ತಲ್ಲ, ಡಾಕ್ಟರ್ ಬರುವುದು ತಡ ಆಗುತ್ತದೆ ಅಂತಾ ಗೊತ್ತಾದ ಮೇಲೂ' ಎಂದರು.

'ಒಂಥರಾ ಭಯವಾಗುತ್ತೆ' ಎಂದ ಸುಲೇಖ ತಲೆ ತಗ್ಗಿಸಿ ಹುಶ್ ಎಂದು ನಿಟ್ಟುಸಿರಿಟ್ಟ.

'ಎಷ್ಟು ವರ್ಷವಾಯ್ತು, ಪದೇಪದೇ ನೋಡ್ತಿದ್ರೆ ಈ ಥರ ಅನ್ನಿಸೋದಿಲ್ಲ. ತುಂಬಾ ವರ್ಷವಾಯ್ತಾ ನೋಡದೇ?' ಎಂದರು.

ಚೂರು ಉಸಿರು ತೆಗೆದು, 'ಸುಮಾರು ಎಂಟು ವರ್ಷ ಆಯ್ತು, ವೈಷ್ಣವಿ ಪ್ರೆಗ್ನೆಂಟ್ ಆಗಿದ್ದಾಗ ಬಂದು ಹೋಗಿದ್ದು ಬಿಟ್ರೆ ನಂತರ ಬರೋಕೇ ಆಗ್ಲಿಲ್ಲ. ಅಮ್ಮ ತೀರಿಕೊಂಡಾಗ ನಾನು ಯು.ಕೆ.ನಲ್ಲಿದ್ದೆ. ಬಿಜಿ ಶೆಡ್ಯೂಲ್ ಆಗಿದ್ದರಿಂದ ಬರ್ಲಿಕ್ಕೇ